**ದಿನಾಂಕ -31.08.2021 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟಿ ಸವಾಲು - 1 ನೇ ಪ್ರತಿವಾದಿ ಪರ ಶ್ರೀ ಸಿ.ಎನ್.ಎಂ.ಪಿ ವಕೀಲರಿಂದ**

ದಾವ ಜಮೀನು ಸರಕಾರಿ ಜಮೀನು ಎಂದರೆ ಸರಿ. ನಾವು ಸರಕಾರದಿಂದ ಖರೀದಿ ಮಾಡಿದ ಬಗ್ಗೆ ದಾಖಲಾತಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸಂತೋಷಕುಮಾರ ದೀಕ್ಷಿತ ಮತ್ತು ರಾಮಲಾಲ್ ದೀಕ್ಷಿತ ರವರ ಬಳಿ ನಾನು ಚಿಕ್ಕವನಿಂದಲೂ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಈ ಮೊದಲು ದಾವ ಜಮೀನಿನ ಮೇಲೆ ರಾಯಚೂರು ಮುನ್ಸಿಫ ನ್ಯಾಯಾಲಯದಲ್ಲಿ ದಾವ ಮಾಡಿದ ಬಗ್ಗೆ ಗೊತ್ತ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ದಾವೆಯು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಯನ್ನು ಸಂತೋಷಕುಮಾರ ದೀಕ್ಷಿತ ಮತ್ತು ರಾಮಲಾಲ್ ದೀಕ್ಷಿತ ಮತ್ತು ಅವರ ತಂದೆ ಖರೀದಿ ಮಾಡಿಲ್ಲ ಆದ್ದರಿಂದ ಅವರಿಗೆ ಸ್ವತ್ತಿನ ಮೇಲೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಸರಕಾರದವರು ಸದರಿ ದಾವ ಆಸ್ತಿಯನ್ನು ಸರ್ವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವ ಆಸ್ತಿ ಮುಂದೆ ಇರುವ ಜಮೀನನ್ನು ಮಾಡಿರುತ್ತಾರೆ ಎಂದು ಹೇಳುತ್ತಾರೆ. ವಿಮಾನ ನಿಲ್ದಾಣಕ್ಕಾಗಿ ದಾವ ಜಮೀನನ್ನು ಸರ್ವೆ ಮಾಡಿದ ವಿಚಾರ ಗೊತ್ತಿದ್ದರು ಸಹ ವಾದಿಗಳ ಪರವಾಗಿ ಸಾಕ್ಷಿ ಹೇಳಲು ಬಂದಿದ್ದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಕಂಡಿಕೆ 3 ರಲ್ಲಿ ಪ್ರತಿವಾದಿಯು 1 ನೇ ವಾದಿ ಚಿಕ್ಕಪ್ಪನ ಸ್ವತ್ತನ್ನು ಒತ್ತುವರಿ ಮಾಡಿ ಮನೆ ಕಟ್ಟಿದಾರೆ ಎಂದು ಹೇಳಿದ ಜಮೀನು ದಾವ ಜಮೀನು ಅಲ್ಲ ಎಂದರೆ ಸಾಕ್ಷಿ ಉತ್ತರಿಸಿರುವುದಿಲ್ಲ. ನನ್ನ

ಸಾಕ್ಷಿ ಪ್ರಮಾಣ ಪತ್ರದ ಕಂಡಿಕೆ 4 ರಲ್ಲಿ ದಾವ ಸ್ವತ್ತಿನಲ್ಲಿ ವಾದಿಯು ಕಂಪೌಂಡ ಗೋಡೆ ಕಟ್ಟಿದ್ದಾನೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಸರಿ ಎಂದು ಹೇಳುತ್ತಾರೆ. ಸದರಿ ಕಂಪೌಂಡ ಗೋಡೆಯನ್ನು ಸಾರ್ವಜನಿಕರು ತಿರುಗಾಡುವ ರಸ್ತೆಯಲ್ಲಿ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಕಂಪೌಂಡ ಗೋಡೆಯನ್ನು ಸಾರ್ವಜನಿಕರು ತಿರುಗಾಡುವ ರಸ್ತೆ ಇರುವುದರಿಂದ ರಾಯಚೂರು ನಗರಸಭೆ ಇವರು ತೆರುವುಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಕಂಪೌಂಡ ಗೋಡೆ ತೆರುವುಗೊಳಿಸುವ ವಿಚಾರ ಗೊತ್ತಿದ್ದರು ವಾದಿ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕಳೆದ 4 ವರ್ಷಗಳ ಹಿಂದೆ ರಾಯಚೂರು ಜಿಲ್ಲಾಧಿಕಾರಿಗಳು ದಾವ ಸ್ವತ್ತನ್ನು ಅಳತೆ ಮಾಡಿ ವರದಿ ಮಾಡಲು ಆದೇಶ ಮಾಡಿದ ಬಗ್ಗೆ ಗೊತ್ತ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಆದೇಶದಂತೆ ಸರ್ವೆ ಇಲಾಖೆಯವರು ದಾವ ಜಮೀನನ್ನು ಸರ್ವೆ ಮಾಡಿ ಸದರಿ ಜಮೀನು ಸರಕಾರಿ ಜಮೀನು ಎಂದು ರಾಯಚೂರು ಜಿಲ್ಲಾಧಿಕಾರಿಗಳಿಗೆ ವರದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವ ಜಮೀನು ಮತ್ತು ಒಟ್ಟು 4 ಎಕರೆ ಜಮೀನು ಸರಕಾರಿ ಜಮೀನು ಎಂದರೆ ಸಾಕ್ಷಿ ಸರಕಾರಿ ಜಮೀನು ಇರಬಹುದು ನಮಗೆ ಹಕ್ಕು ಪತ್ರ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ.

ವಾದಿ ಸಂತೋಷಕುಮಾರ ಮತ್ತು ಅವರ ತಂದೆ ಯಾವುದೇ ಕಾಲಕ್ಕೆ ದಾವ ಜಮೀನನ್ನು ನೊಂದಣಿ ಕಛೇರಿಯಲ್ಲಿ ನೊಂದಣಿ ಪತ್ರದ ಮೂಲಕ ಖರೀದಿ ಮಾಡಿಲ್ಲ ಎಂದರೆ ಸಾಕ್ಷಿ ಉತ್ತರಿಸಿರುವುದಿಲ್ಲ. ನನಗೆ ದಾವ ಆಸ್ತಿ ಬಗ್ಗೆ ಎಲ್ಲ ವಿಷಯ ಗೊತ್ತಿದ್ದರು ಸಹ ವಾದಿ ಮನೆಯಲ್ಲಿ ಮೊದಲಿನಿಂದಲೂ ಕೆಲಸ ಮಾಡುತ್ತಿದ್ದು ಅವರ ಪರವಾಗಿ ಸಾಕ್ಷಿ ಹೇಳಲು ಬಂದಿದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯಕ್ಕೆ ನನ್ನನ್ನು ವಾದಿ ಕರೆದುಕೊಂಡು ಬಂದಿರುತ್ತಾರೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತು. ವಾದಿಗೆ ಈ ದಾವ ಜಮೀನಿನ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**<u>ಪಾಟಿ ಸವಾಲು - 2 ನೇ ಪ್ರತಿವಾದಿ ಪರ ಶ್ರೀ ಸಿ.ಎ.ಆರ್ ವಕೀಲರಿಂದ</u>**

ನನ್ನ ಅಜ್ಜನ ಊರು ಯರಮರಸದಂಡ ಇರುತ್ತದೆ. ನಮ್ಮ ಮನೆ ಮತ್ತು ವಾದಿಯ ಮನೆ ನಡುವೆ 2 ಸಾಲಿನ ಮನೆಗಳ ಅಂತರ ಇರುತ್ತದೆ. ನನ್ನ ಮನೆ ವಾದಿಯ ಮನೆ ಕಂಪೌಂಡ ಮನೆ ಹೊರಗಡೆ ಇರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಮನೆ ನಂ . ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಮನೆ ಯರಮರಸದಂಡರಲ್ಲಿ ಇರುವ ದಾವ ಸ್ವತ್ತಿನ ಬಳಿ ಇದ್ದ ಬಗ್ಗೆ ವಿಳಾಸ ಕುರಿತು ಆಧಾರ ಚೀಟಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿ. ನಾನು ಪೋಲಿಸ ಅಧಿಕಾರಿ, ವೈಧ್ಯಾಧಿಕಾರಿ ಇವರು ಧರಿಸುವ ಸಮವಸ್ತ್ರವನ್ನು ನೋಡಿದರೆ ಗುರುತಿಸುತ್ತೇನೆ. ನನಗೆ ನಗರಸಭೆ ಅಧಿಕಾರಿಗಳು ಮತ್ತು ಪೌರಕಾರ್ಮಿಕರು ನಮ್ಮ ಊರಿಗೆ ಬಂದರೆ ಗುರುತಿಸುತ್ತೇನೆ. ನಾನು ವಾದಿಯ ಪರವಾಗಿ ಸಾಕ್ಷಿ ಹೇಳಲು ಬಂದಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೇಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಅಂತ ಒಪ್ಪಿಕೊಂಡಿರುತ್ತಾರೆ)**

2 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆಎಂಎಫಸಿ
ನ್ಯಾಯಾಧೀಶರು, ರಾಯಚೂರು